ಆರ್ಥಿಕ ಅನುಕೂಲತೆಯನ್ನಾಧರಿಸಿ ಕಟ್ಟಡ ನಿರ್ಮಾಣ ಕಾರ್ಯ ತೆಗೆದುಕೊಳ್ಳುವ ಸಾಧ್ಯಸಾಧ್ಯತೆಯನ್ನು ಪರಿಶೀಲಿಸಲಾಗುವುದು. ಅದು ಮುಗಿದ ನಂತರವೇ ಹೊಸ ಕೋರ್ಸುಗಳನ್ನು ತೆರೆಯುವ ಪ್ರಸ್ತಾವನೆಯನ್ನು ಪರಿಶೀಲಿಸಲು ಸಾಧ್ಯ.

ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವುದು .

1586 - ಶ್ರೀ ಯಜಮಾನ ಮೋತಿ ವೀರಣ್ಣ (ದಾವಣಗೆರೆ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಕ್ಕಳ ಹಿತದೃಷ್ಟಿಯಿಂದ ತರಬೇತಿ ಹೊಂದಿ ನಿರುದ್ಯೋಗಿಗಳಾಗಿರುವ ನರ್ಸರಿ ಶಿಕ್ಷಕಿಯರುಗಳಿಗೆ ಉದ್ಯೋಗ ಒದಗಿಸುವ ದೃಷ್ಟಿಯಿಂದಲೂ ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ವಾಸಿಸುವ ಆಯ್ದ ಪ್ರದೇಶಗಳಲ್ಲಿ ತೆರೆಯಲಾಗುತ್ತಿದೆ. 7ನೇ ಪಂಚವಾರ್ಷಿಕ ಯೋಜನೆಯಲ್ಲಿ 200 ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗಿದೆ. 8ನೇ ಪಂಚವಾರ್ಷಿಕ ಯೋಜನೆಯಲ್ಲಿ 750 ಸರ್ಕಾರಿ ಪೂರ್ಣ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ.

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕಾಗಿರುವುದರಿಂದ ಈಗ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಹೆಚ್ಚಿನ ಆದ್ಯತೆ ಕೊಡಲಾಗುತ್ತಿಲ್ಲ. ಖಾಸಗಿ ವಲಯಗಳಲ್ಲಿ ಇವುಗಳನ್ನು ಪ್ರಾರಂಭಿಸಬಹುದಾಗಿದೆ.

ದಾವಣಗೆರೆ ಸರ್ಕಾರಿ ಕಲಾಶಾಲೆಯನ್ನು ಡಿಗ್ರಿ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸುವುದು.

1585 - ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಸರ್ಕಾರಿ ಕಲಾಶಾಲೆಯನ್ನು ಡಿಗ್ರಿ ಕಾಲೇಜನ್ನಾಗಿ ಮೇಲ್ದರ್ಜೆಗೆ ಏರಿಸಬೇಕೆಂಬ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಈ ವಿಷಯವನ್ನು 1991-92ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ದಾವಣಗೆರೆ ನಗರದ ಬಸ್‌ನಿಲ್ದಾಣಕ್ಕೆ ಡಾಂಬರು ಹಾಕಿಸುವುದು

1583 - ಶ್ರೀ ಯಜಮಾನ್ ಮೋತಿವೀರಣ್ಣ (ದಾವಣಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆ ನಗರದಲ್ಲಿ ಬಸ್‌ನಿಲ್ದಾಣಕ್ಕೆ ಡಾಂಬರು ಹಾಕಿಸದಿರುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಬಸ್ ನಿಲ್ದಾಣ ಪ್ರಾರಂಭವಾಗಿ 3 ವರ್ಷಗಳಾಗಿದ್ದರೂ ಸಹ ಕ್ಯಾಂಟೀನ್ ಪ್ರಾರಂಭವಾಗದಿರುವುದರಿಂದ ಪ್ರಯಾಣಿಕರಿಗೆ ಹಾಗೂ ಸಾರಿಗೆ ಮಂಡಳಿ ಸಿಬ್ಬಂದಿ ವರ್ಗದವರಿಗೆ ತೊಂದರೆಯಾಗಿದೆಯೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?